# ಸ್ವಾತಂತ್ರ್ಯ ಹೋರಾಟದಲ್ಲಿ ಅವಿಭಜಿತ ಧಾರವಾಡ ಜಿಲ್ಲೆಯ ಮಹಿಳೆಯರ ಪಾತ್ರ.

**ಶ್ರೀಮತಿ ಮಂಜುಳಾ ಯಲಿಗಾರ**
ಹಿರಿಯ ಸಹಾಯಕ ನಿರ್ದೇಶಕರು
ಪ್ರಾದೇಶಿಕ ಪತ್ರಗಾರ ಇಲಾಖೆ
ಧಾರವಾಡ.

ಬ್ರಿಟಿಷರ ಆಗಮನವನ್ನು ವಸಾಹತುಶಾಹಿ ಧೋರಣೆಯುಳ್ಳ ಆಳ್ವಿಕೆಯ ಅಪಾಯಕಾರಿ ಪ್ರಭಾವವನ್ನು ದೇಶೀಯ ಅರಸರು, ಸಂಸ್ಥಾನಿಕರು ಗಮನಿಸಿರಲಿಲ್ಲ. ದೇಶದ ಖನಿಜ ಸಂಪತ್ತು, ಕೃಷಿ, ಅರಣ್ಯ, ಕೈಗಾರಿಕೆಯನ್ನು ಲೂಟಿ ಮಾಡಲು ತಮ್ಮ ಲಾಭಕ್ಕಾಗಿ ಸಾರಿಗೆ, ಶಿಕ್ಷಣ, ಆಡಳಿತ, ಸುಧಾರಣೆಗಳನ್ನು ಜಾರಿಗೆ ತಂದರು. ಲಾರ್ಡ್ ಡಾಲ್‌ಹೌಸಿ ಜಾರಿಗೆ ತಂದ 'ದತ್ತಕ ಮಕ್ಕಳಿಗೆ ಹಕ್ಕಿಲ್ಲ' ಎಂಬ ಕಾನೂನಿನ ವಿರುದ್ಧ ಸಿಡಿದೆದ್ದು ನಡೆದ ಕ್ರಿ.ಶ. 1857ರ ಝುನ್ಸಿರಾಣಿ ಲಕ್ಷ್ಮೀಬಾಯಿ ದಂಗೆಯು ಬ್ರಿಟಿಷ ವಸಾಹತುಶಾಹಿ ವಿರೋಧಕ್ಕೆ ಪ್ರೇರಣೆ ನೀಡಿತು. ಹೀಗೆ ಪ್ರಾರಂಭಗೊಂಡ ಸಿಪಾಯಿ ದಂಗೆ ದೇಶವ್ಯಾಪ್ತಿಯಾದಾಗ ಅವಿಭಜಿತ ಧಾರವಾಡ ಜಿಲ್ಲೆಯ ಪ್ರದೇಶದಲ್ಲಿಯೂ ನರಗುಂದದ ಬಾಬಾಸಾಹೇಬ, ಸೊರಟೂರದ ಕೆಂಚನಗೌಡ, ಬೂದಿಹಾಳದ ದೇಸಾಯಿ ಅವರು ಧಾರವಾಡದ ಕೋಟೆಯನ್ನು ಬ್ರಿಟಿಷರಿಂದ ರಕ್ಷಿಸಿಕೊಳ್ಳಲು ಪ್ರಯತ್ನಿಸಿದರು. ಅವಿಭಜಿತ ಧಾರವಾಡ ಜಿಲ್ಲೆಯ ಪ್ರದೇಶವು ಕ್ರಿ.ಶ. 1817 ರಿಂದ 1947ರವರೆಗೆ ಬ್ರಿಟಿಷ ವಸಾಹತುಶಾಹಿ ಆಳ್ವಿಕೆಯ ಪರಧಿಯಲ್ಲಿತ್ತು. ಅವರ ವಸಾಹತುಶಾಹಿ ಧೋರಣೆ, ಪ್ರಕೃತಿ ವಿಕೋಪಗಳು, ಗೃಹ ಕೈಗಾರಿಕೆಗಳು, ಆಡಳಿತಾತ್ಮಕ ಧೋರಣೆಗಳ ವಿರುದ್ಧ ಆಗಲೇ ಹಲವು ಸಶಸ್ತ್ರ ದಂಗೆಗಳನ್ನು ನಡೆಸಿದ್ದರು. ಇದರ ಪರಿಣಾಮ ಧಾರವಾಡ ಪ್ರದೇಶದ ಮೇಲೂ ಬೀರಿತು.

ಕ್ರಿ.ಶ. 1800 ರಿಂದ 1885ರ ಅವಧಿಯಲ್ಲಿ ಧಾರವಾಡ ಜಿಲ್ಲೆಯಲ್ಲಿಯೂ ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಅನೇಕ ದಂಗೆಗಳು ನಡೆದವು. ಬ್ರಿಟಿಷ ವಸಾಹತುಶಾಹಿ ಧೋರಣೆ, ಪ್ರಕೃತಿ ವಿಕೋಪಗಳು, ಕಂದಾಯ ನೀತಿ, ಗೃಹ ಕೈಗಾರಿಕೆಗಳ ಅವನತಿ, ಸಶಸ್ತ್ರ ಬಂಡಾಯಗಳ ಮೌನ, ಬ್ರಿಟಿಷರ ವಿರೋಧಿ ಭಾವನೆಗಳು ರಾಷ್ಟ್ರೀಯ ಚಟುವಟಿಕೆಗಳಾಗಿ ಹೋರಾಟದ ಹಾದಿ ಹಿಡಿದವು. ಆ ಸಂದರ್ಭದಲ್ಲಿ ಉಗ್ರ ಕ್ಷಾಮ ಬಂದಾಗಲೂ ಭೂಕಂದಾಯ ಸಂಗ್ರಹ ರದ್ದುಗೊಳಿಸದೆ ಮುಂದೂಡಿದರು. ನೇಯ್ಗೆಯ ಕೈ ಕಸುಬುಗಳು, ಗುಡಿ ಕೈಗಾರಿಕೆಗಳು ಇತ್ಯಾದಿ ಉದ್ಯೋಗಗಳು ಕಡಿಮೆಯಾದವು. ಕ್ರಿ.ಶ. 1873ರ ಉಪ್ಪಿನ ಕಾನೂನಿನಿಂದ ವಿದೇಶಿ ಕಾಗದ ಬಳಕೆಯಿಂದಾಗಿ ಧಾರವಾಡ, ಗುತ್ತಲ, ಹುಬ್ಬಳ್ಳಿ, ಕರ್ಜಗಿ, ನವಲಗುಂದ, ರಾಣೇಬೆನ್ನೂರುಗಳಲ್ಲಿದ್ದ ಕಾಗದದ ಉದ್ದಿಮೆಗಳು ಕಣ್ಮರೆಯಾದವು. ಆ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯ

ಪ್ರದೇಶದಲ್ಲಿ ತಿಲಕರ ಭಾಷಣ ಮತ್ತು ಪತ್ರಿಕೆಗಳಲ್ಲಿ ಪ್ರಸಾರವಾಗುತ್ತಿದ್ದ ಸುದ್ದಿಗಳು ಜನರಲ್ಲಿ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡಿದವು.

ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳ ಕೆಲಭಾಗಗಳು ಕಿತ್ತೂರು ಸಂಸ್ಥಾನದ ಅಧೀನದಲ್ಲಿದ್ದವು. ಕ್ರಿ.ಶ. 1816ರಲ್ಲಿ ಮಲಸರ್ಜ ದೊರೆಯ ಮರಣದ ನಂತರ ಕ್ರಿ.ಶ. 1824ರಲ್ಲಿ ಚೆನ್ನಮ್ಮಳು ಆಡಳಿತ ಚುಕ್ಕಾಣಿ ಹಿಡಿದಳು. ಇವಳು ಬ್ರಿಟಿಷರ ಅನುಮತಿ ಪಡೆಯದೆ ಕಿತ್ತೂರು ಸಂಸ್ಥಾನಕ್ಕೆ ದತ್ತು ಮಗನನ್ನು ಸ್ವೀಕರಿಸಿದಳು. ಬ್ರಿಟಿಷರು ಈ ಘಟನೆಯನ್ನೇ ಅಸ್ತ್ರವನ್ನಾಗಿಟ್ಟುಕೊಂಡು ಕಿತ್ತೂರಿನ ಮೇಲೆ ದಾಳಿ ಮಾಡಲು ಯೋಜನೆ ರೂಪಿಸಿದರು. ಅಂದು ಜ್ಹಾನ್ ಥ್ಯಾಕರೆ ಧಾರವಾಡ ಜಿಲ್ಲೆಯ ಕಲೆಕ್ಟರನಾಗಿದ್ದನು. ಈತನು ಕಿತ್ತೂರು ಸಂಸ್ಥಾನದ ದತ್ತಕ ವಿಷಯವನ್ನು ಆಕ್ಷೇಪಿಸಿ, ದಕ್ಷಿಣಾಧಿಪತಿಯಾಗಿದ್ದ ಚಾಪ್ಲಿನ್‌ನಿಗೆ ಸುಳ್ಳು ವರದಿಗಳನ್ನು ನೀಡಿ, ಸಂಸ್ಥಾನದ ಮೇಲೆ ಸೈನ್ಯ ಸಮೇತನಾಗಿ ದಾಳಿ ಮಾಡಲು ಸಂಚನ್ನು ರೂಪಿಸಿದನು. ಸಂಸ್ಥಾನದ ಕಾರುಭಾರಿಗಳಾದ ಮಲ್ಲಪ್ಪಶೆಟ್ಟಿ ಹಾಗೂ ವೆಂಕಟರಾವನ ಸಹಾಯದಿಂದ ಕಿತ್ತೂರಿನ ಆಂತರಿಕ ವಿಷಯಗಳನ್ನು ಸಂಗ್ರಹಿಸಿದನು.

ಕಿತ್ತೂರ ದಂಗೆಯಲ್ಲಿ ಕ್ರಿ.ಶ. 1824ರ ಅಕ್ಟೋಬರ್ 23ರಂದು ಚೆನ್ನಮ್ಮನ ಆದೇಶದ ಮೇರೆಗೆ ಅಮಟೂರ ಬಾಳಪ್ಪನು ಥ್ಯಾಕರೆಯ ರುಂಡವನ್ನು ನೆಲಕ್ಕುರಿಳಿಸಿದನು. ಸೌಹಾರ್ದಯುತ ಚಿಂತನೆಯೊಂದಿಗೆ ಚೆನ್ನಮ್ಮಳು ಕೈದಿಗಳನ್ನು ಬಿಡುಗಡೆ ಮಾಡಿದಳು. ಆದರೆ ಬ್ರಿಟಿಷರು ತಕ್ಷಣ ಸೋಲಿನ ಪ್ರತಿಕಾರಕ್ಕಾಗಿ ಮತ್ತು ಸೇಡಿನ ಮನೋಭಾವನೆಯಿಂದಾಗಿ ಕ್ರಿ.ಶ. 1824ರ ಡಿಸೆಂಬರ್ 3ರಂದು ಕಿತ್ತೂರಿನ ಮೇಲೆ ಮತ್ತೆ ಯುದ್ಧ ಸಾರಿದರು. ಈ ಸಂದರ್ಭದಲ್ಲಿ ಸ್ಥಳೀಯರ ಮೋಸಕ್ಕೆ ಒಳಗಾಗಿ ಕಿತ್ತೂರಿನ ಯೋಧರು ಸೋಲಬೇಕಾಯಿತು. ಬ್ರಿಟಿಷರು ಒಡೆದು ಆಳುವ ನೀತಿಯಿಂದಾಗಿ ಸ್ಥಳೀಯ ಪಿತೂರಿಗಳ ಸಹಾಯವನ್ನು ಪಡೆದುಕೊಂಡರು. ಕಿತ್ತೂರಿನ ಮದ್ದಿನ ಕೋಣೆಯನ್ನು ಕೈವಶ ಮಾಡಿಕೊಂಡು ಬ್ರಿಟಿಷ ಅಧಿಕಾರಿಗಳು ಕೋಟೆಯೊಳಗೆ ನುಗ್ಗಿ ಚೆನ್ನಮ್ಮಳನ್ನು ಹಾಗೂ ಕಿತ್ತೂರಿನ ಮುಂದಾಳುಗಳನ್ನು ಸೆರೆಹಿಡಿದರು. ಹಲವು ಸಾವು–ನೋವುಗಳೊಂದಿಗೆ ಸರ್ ಥಾಮಸ್ ಮನ್ರೋ ಜಯಗಳಿಸಿದನು. ಕಿತ್ತೂರು ಸಂಸ್ಥಾನದ ಆಡಳಿತಕ್ಕೊಳಪಟ್ಟಿದ್ದ 358 ಹಳ್ಳಿಗಳು, 72 ಕೋಟೆಗಳು ಕ್ರಿ.ಶ. 1824ರ ಡಿಸೆಂಬರ್ 18ರಂದು ಧಾರವಾಡ ಜಿಲ್ಲಾ ಕಲೆಕ್ಟರನ ಆಳ್ವಿಕೆಗೊಳಪಟ್ಟವು. ಈ ಸಮಯದಲ್ಲಿ ಸೆರೆಹಿಡಿದ ಚೆನ್ನಮ್ಮಳನ್ನು ಒಂದು ದಿನ ಧಾರವಾಡ ಕಲೆಕ್ಟರನ ಬಂಗ್ಲೆಯಲ್ಲಿ ಇಡಲಾಗಿತ್ತೆಂದು ಐತಿಹ್ಯವಿದೆ. ಬ್ರಿಟಿಷರ ವಿರುದ್ಧ ಪ್ರಪ್ರಥಮವಾಗಿ ಹೋರಾಡಿದ ಧೀರಮಹಿಳೆ ಎಂದೆನಿಸಿರುವ ಚೆನ್ನಮ್ಮಳ ಹೋರಾಟವು ಕರ್ನಾಟಕದ ಚರಿತ್ರೆಯಲ್ಲಿ ಬೆಳ್ಳಿ ಚುಕ್ಕೆಯಾಗಿ ಮಿಂಚಿದೆ. ಅವಳ ವ್ಯಕ್ತಿತ್ವವು ನಾಡಿಗೆ ಆದರ್ಶ ಪ್ರಾಯವಾಗಿದೆ.

ಭರತ ಖಂಡದಾದ್ಯಂತ ಚಳುವಳಿ ನಡೆಯಬೇಕು, ರಾಷ್ಟ್ರ ಸ್ವತಂತ್ರ್ಯವಾಗಬೇಕೆಂದು ಮಹಾತ್ಮರ ಅನುಯಾಯಿಗಳಾಗಿ ರಾಷ್ಟ್ರಪ್ರೇಮವನ್ನು ಮೈಗೂಡಿಸಿಕೊಂಡು, ತಮ್ಮ ಸರ್ವಸ್ವವನ್ನೇ ತ್ಯಾಗ ಮಾಡಿ,

ಮಹಿಳೆಯರು ಕೂಡಾ ಹೋರಾಟಕ್ಕೆ ಧುಮುಕಿದರು. ಪ್ರಾಚೀನ ಕಾಲದಿಂದಲೂ ಯುದ್ಧರಂಗದಲ್ಲಿ ಖಡ್ಗವನ್ನು ಹಿಡಿದು ಕಿತ್ತೂರ ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ ಮುಂತಾದವರು ಹೋರಾಟದ ಸ್ಫೂರ್ತಿಯ ಅಂಗವಾಗಿ, ಕುಟುಂಬದ ನಾರಿಯರು ವೀರಮಣಿಗಳಾಗಿ ಸ್ವಾತಂತ್ರ್ಯಕ್ಕೆ ನುಗ್ಗಿದರು. 1921ರಲ್ಲಿ 101 ಜನ ಸ್ತ್ರೀಯರು ಸ್ವಯಂ ಸೇವಕಿಯರಾಗಿ ಸಲ್ಲಿಸಿದ ಸೇವೆ ಅಪಾರವಾದದ್ದು. ಧಾರವಾಡದಲ್ಲಿ ಮಹಿಳೆಯರಿಗಾಗಿ ಭಗಿನಿ ಮಂಡಲ ಪ್ರಾರಂಭವಾಯಿತು. ನಾಗಮ್ಮ ಪಾಟೀಲರು ಮಹಿಳಾ ವಿದ್ಯಾಪೀಠದ ನೆಪದಲ್ಲಿ ಕನ್ಯೆಯರನ್ನು ಸಂಘಟಿಸಿ ಸ್ವಾತಂತ್ರ್ಯ ಆಂದೋಲನಕ್ಕೆ ಜಾಗೃತಿಗೊಳಿಸಿದರು. ಕೃಷ್ಣಬಾಯಿ ಪಂಜೇಕರ ಶಕುಂತಲಾ ಕುರ್ತಕೋಟಿ ಮತ್ತು ಲೀಲಾವತಿ ಮಾಗಡಿ ಮಹಿಳಾ ಸಂಘಟನೆಗಳನ್ನು ರಚಿಸಿ ಗಾಂಧೀ ಆದರ್ಶಗಳನ್ನು ಮಹಿಳೆಯರ ಹೃದಯದಲ್ಲಿ ಬಿತ್ತಿದರು. ಚಳುವಳಿಗೆ ಪೂರಕವಾದಂತಹ ಶಿಕ್ಷಣ, ಗುಡಿಕೈಗಾರಿಕೆ, ಆಶ್ರಮಗಳ ಮೂಲಕ ಗದಗ ಮಹಿಳಾ ಸಮಿತಿ ಹುಬ್ಬಳ್ಳಿಯ ಭಗಿನಿ ಮಂಡಳಿ, ಹಾನಗಲ್ಲಿನ ರಾಷ್ಟ್ರೀಯ ಕನ್ಯಾಶಾಲೆ, ಧಾರವಾಡದ ಮಹಿಳಾ ಸಮಾಜ, ಹಾವೇರಿಯಲ್ಲಿ ಮಹಿಳಾ ಸಂಸ್ಥೆಯ ತರಬೇತಿ ಕೇಂದ್ರಗಳು ಮಹಿಳೆಯರನ್ನು ಆಂದೋಲನಕ್ಕೆ ತಯಾರಿಗೊಳಿಸಿದವು.

1923ಕ್ಕೆ ಹುಬ್ಬಳ್ಳಿಗೆ ಬಂದು ನೆಲೆಸಿ, ಮುಂದೆ 1924ರ ಬೆಳಗಾವಿ ಅಧಿವೇಶನಕ್ಕೆ ಉಮಾಬಾಯಿ ಕುಂದಾಪೂರವರು ಸೇವಾದಳದ ಸ್ವಯಂಸೇವಕಿಯರನ್ನು ಸಂಘಟಿಸಿದರು. ಅಲ್ಲದೇ ಕೃಷ್ಣಬಾಯಿ ಪಂಜೇಕರರು ಮತ್ತು ಶ್ರೀಮತಿ ಕಮಾಲಾದೇವಿ ಚಟ್ಟೋಪಾಧ್ಯಾಯ ಅವರು ಸ್ವಾತಂತ್ರ್ಯ ಆಂದೋಲನದಲ್ಲಿ ಧಾರವಾಡವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ದ.ಪ. ಕರಮಕರ ಹಾಗೂ ಶಾಂತಾಬಾಯಿ ಕರಮಕರ ಶಂಕುತಲಾ ಕುರ್ತಕೋಟಿ, ಶಂಕುತಲಾ ದಾಬಡೆ ತಮ್ಮ ಪತಿಯರಿಗೆ ಸಹಾಯಕಾರಿಯಾಗಿದ್ದುಕೊಂಡು ಧಾರವಾಡ ಜಿಲ್ಲೆಯ ಗ್ರಾಮಗಳಲ್ಲಿ ಸಂಚರಿಸಿ ಭಾಷಣ ಮಾಡಿ ಮಹಿಳೆಯರನ್ನು ಹುರಿದುಂಬಿಸಿದರು. ಇದೇ ರೀತಿಯಾಗಿ ಚೆನ್ನಮ್ಮ ಭದ್ರಾಪೂರ, ನಾಗಮ್ಮ ಪಾಟೀಲರು, ಲೀಲಾವತಿ ಮಾಗಡಿಯವರು ಹುಬ್ಬಳ್ಳಿ ಸುತಮುತ್ತ ಪ್ರದೇಶಗಳಲ್ಲಿ ಪ್ರಚಾರ ನಡೆಸಿದರು. 1934ರಲ್ಲಿ ಗಾಂಧೀಜಿ ಜೊತೆಗೆ ಹರಿಜನ ಕೇರಿಯ ಪ್ರವಾಸ ಕೈಗೊಂಡರು. 24–10–1942ರಂದು ವಿಮಲಾ ಗುಲ್ವಾಡಿ ಹಾಗೂ ಹೇಮಂತ ಶಿರೋಳಕರ್ ಎಂಬ ವಿದ್ಯಾರ್ಥಿನಿಯರು ಧಾರವಾಡ ಜಿಲ್ಲಾ ನ್ಯಾಯಾಲಯದಲ್ಲಿ ನ್ಯಾಯಧೀಶರ ಕೊಠಡಿಯಲ್ಲಿ ತ್ರಿವರ್ಣಧ್ವಜ ಹಾರಿಸಿದರು. ಈ ಕಾರಣಕ್ಕಾಗಿ ಅವರಿಗೆ 3 ತಿಂಗಳ ಶಿಕ್ಷೆಯಾಯಿತು. ಧಾರವಾಡ ತಾಲೂಕಿನ ಕ್ಯಾರಕೊಪ್ಪದಲ್ಲಿ ಈರಮ್ಮ ಕೊಟಬಾಗಿ ಚಳುವಳಿಯಲ್ಲಿ ಭಾಗವಹಿಸಿದ್ದರು. 1906ರಲ್ಲಿ ಕರಡಿಗುಡ್ಡದ ಸಂಕವ್ವ ಮುಗಳಿ ಎಂಬ ಸ್ವಾತಂತ್ರ್ಯ ಹೋರಾಟಗಾರ್ತಿ ಚರಕ ನೂಲುವುದು, ಕೈತೋಟ ಮಾಡುವುದು ತರಕಾರಿ ಬೆಳೆಯುತ್ತ ಶಾಲೆಯ ಮಕ್ಕಳೆಲ್ಲ ಸ್ವಾತಂತ್ರ್ಯ ಚಳುವಳಿಗೆ ಧುಮುಕುವಂತೆ ಮಾಡಿದಳು. ಮರೆವಾಡದಲ್ಲಿ ಸ್ವಾತಂತ್ರ್ಯ ಹೋರಾಟದ ಸಭೆಯು ಕೂಡಾ ನಡೆದಿತ್ತು. ಅಮ್ಮಿನಭಾವಿಯಲ್ಲಿ ಮಹಾತ್ಮ ಗಾಂಧೀಜಿ ಸಭೆ ನಡೆಸಿದರು. ಮುಂಡರಗಿ ತಾಲೂಕಿನಲ್ಲಿ ಬಿದರಳ್ಳಿಯಲ್ಲಿ ಬ್ರಿಟಿಷ ಪೋಲಿಸ್ ತುಕಡಿಯ ಪಡೆ ಇತ್ತು. ಶಿರೋಳದಲ್ಲಿ ಬ್ರಿಟಿಷ ಅಧಿಕಾರಿಯ ಕುದುರೆ ಮರಿಗೆ ಜನ್ಮ ನೀಡಿ ಮರಣ ಹೊಂದಿದಾಗ ಅದಕ್ಕೆ

ಸಿರಿಯಾಳಮ್ಮ ನಿತ್ಯ ಹಾಲು ಕುಡಿಸಿದಾಗ ಅವಳ ಬಳೆಯಲ್ಲಿ ಬೆಳೆಯಿತು. ಇದರ ಕುರುಹಾಗಿ ಬ್ರಿಟಿಷ್ ಅಧಿಕಾರಿ ಆ ಮಹಿಳೆಗೆ ಹಳ್ಳದ ಜಾಗೆಯನ್ನು ಬಹುಮಾನ ನೀಡಿದರು.

ಹಾವೇರಿಯಲ್ಲಿ ನಾಗವ್ವ ನರಗುಂದ, ಹೊಸರಿತ್ತಿಯ ಯಲ್ಲಮ್ಮ ಕಮತ ಕಾನೂನು ಭಂಗ ಚಳುವಳಿಯಲ್ಲಿ ವಿದೇಶಿ ವಸ್ತ್ರ ಮಾರುವ, ಮದ್ಯ ಮಾರುವ ಅಂಗಡಿಗಳ ಮುಂದೆ ಪಿಕಿಟಿಂಗ್ ನಡೆದಾಗ ಇಂದಿರಾಬಾಯಿ ಹರಪನಹಳ್ಳಿ ತುಳಸಿಬಾಯಿ ಅರಿಸಿದ್ದ, ತಾರಾಬಾಯಿ ವಾಜ್ಪೆ, ಜಂದೆವ್ವಾ ಕುನ್ನಿಭಾವಿ, ಮುಂತಾದ ಮಹಿಳೆಯರು ಗದಗಿನಲ್ಲಿ ಸತ್ಯಾಗ್ರಹ ಮಾಡಿದರು. ಮಣಕವಾಡ ಯಲ್ಲವ್ವ ಶಂಕರಗೌಡ್ರ ಹಾಗೂ ಯಮನೂರಲ್ಲಿ ಶಾಂತವ್ವ ಕಮ್ಮಾರವರು ಚಳುವಳಿಗಾರರಿಗೆ ಆಹಾರವನ್ನು ಒದಗಿಸುತ್ತಿದ್ದರು. ಡಾ. ಸೂರ್ಯನಾಥ ಕಾಮತ ಹೇಳುವಂತೆ ನಿಸ್ಸಂಶಯವಾಗಿಯೂ ಕರ್ನಾಟಕದಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿ ಧೈರ್ಯ ತ್ಯಾಗಗಳ ರಮ್ಯ ಕಥಾನಕಗಳಲ್ಲಿ, ವಿದ್ಯಾರ್ಥಿಗಳು, ಕಾರ್ಮಿಕರು, ಗ್ರಾಮೀಣರು, ರೈತರು, ವೀರವನಿತೆಯರು ಒಟ್ಟಾಗಿ ಹೋರಾಡಿದ್ದರ ಪ್ರತಿಫಲ ಎಂದು ಹೇಳಿದ್ದಾರೆ. ಜಿಲ್ಲೆಯ ಕರ್ಮವೀರ, ಸಂಯುಕ್ತ ಕರ್ನಾಟಕ, ಚಂದ್ರೋದಯ, ಪತ್ರಿಕೆಗಳು ಮಹಿಳಾ ಹೋರಾಟದ ವಿಚಾರಧಾರೆಗಳನ್ನು ಪ್ರಕಟಿಸಿದವು. ರಾಣೆಬೆನ್ನೂರಿನಲ್ಲಿ ಬಸಮ್ಮ ಕುಸುನೂರು, ಗದಿಗೆಮ್ಮ ಹಂಪಾಳಿರವರು 1942ರ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು.

ಉತ್ತರ ಕರ್ನಾಟಕದ ಮಹಿಳೆಯರು ವಿಶೇಷವಾಗಿ ಕರ ನಿರಾಕರಣೆ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಅನೇಕ ಸ್ತ್ರೀಯರು ಕಾರಾಗೃಹವನ್ನು ಅನುಭವಿಸಿದರು. ಕರ ನಿರಾಕರಣೆಯಲ್ಲಿ ಜಪ್ತದ ಮಾಲನ್ನು ಲೀಲಾವಿನಲ್ಲಿ ಯಾರು ಕೊಳ್ಳದಂತೆ ಸಂಘಟಿಸಿ ದಿ.ವೆಂಕಟರಾಯಯ್ಯನವರ ಪತ್ನಿ ಶ್ರೀಮತಿ ಗೌರಮ್ಮನವರು 50 ಜನ ಸ್ತ್ರೀಯರನ್ನು ಕರೆ ತಂದು ಸತ್ಯಾಗ್ರಹ ನಡೆಸಿದರು. ಅವರಿಂದ ಊರವರು ಯಾರು ಕೊಳ್ಳಲೂ ಸಿಗದಿದ್ದಾಗ ಹುಬ್ಬಳ್ಳಿಗೆ ಬಂದು ಮಾರಿದರು. ಕಲಾಲ ಲಕ್ಷ್ಮಮ್ಮನೆಂಬುವರ 31 ದಿನ ಉಪವಾಸ ಮಾಡಿ ಜಪ್ತಾದ ತನ್ನ ಎಮ್ಮೆಯನ್ನು ಮರಳಿ ಪಡೆದರು. ಗ್ರಾಮೀಣ ಸ್ತ್ರೀಯರು ನೇರವಾಗಿ ಹೋರಾಡುವ ಚಳುವಳಿಗಾರರಿಗೆ ಪೋಲಿಸರಿಂದ ರಕ್ಷಣೆ ನೀಡುತ್ತಿದ್ದರು. ಜಿಲ್ಲೆಯ ಮೆಣಸಿನಹಾಳದ ಶ್ರೀ ತಿಮ್ಮನಗೌಡ ತಾಯಿ ಹಾಲಮ್ಮಳು 1942 ರಲ್ಲಿ ಹಿಂಡಲಗಾ ಜೈಲನಲ್ಲಿದ್ದರು. ಅಲ್ಲದೆ ಸ್ತ್ರೀಯರು, ಸರಾಯಿ ಅಂಗಡಿ, ಪರದೇಶಿ ವ್ಯಾಪಾರದ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದರು. ಪ್ರಭಾತ ಫೇರಿ ಹಮ್ಮಿಕೊಳ್ಳುತ್ತಿದ್ದರು.

1.1.1924ರಲ್ಲಿ ಹುಬ್ಬಳ್ಳಿಯಲ್ಲಿ ಸೇವಾದಳ ಅಸ್ತಿತ್ವಕ್ಕೆ ಬಂತು. ಈ ಸೇವಾದಳದಲ್ಲಿ ಲೋಕರೆ, ಕೆ.ಎ.ವೆಂಕಟರಾಯಯ್ಯ ಏಕಂಬರ ಅಯ್ಯರ್ ಶಂ.ಬಾ.ಮನಗೂಳಿ, ರಾ.ವೆ.ಕರಗುದರಿ ಶ್ರೀಮತಿ ಉಮಾಬಾಯಿ ಕುಂದಾಪುರ, ಶಿವಶಂಕರಪ್ಪ ದೇವಪುರ ಬುರ್ಲಿಬಿಂದು ಮತ್ತು ಶಿನಪ್ಪ ನೀರಲಕೇರಿ ಸೇವಾದಳದಲ್ಲಿ ದುಡಿದರು. ಕಮಲಾದೇವಿ ಚಟ್ಟೋಪಾಧ್ಯಾಯರೂ ಕೂಡಾ ಇದರ ಸದಸ್ಯರಾಗಿದ್ದರು

1934ರಲ್ಲಿ ಗಾಂಧೀಜಿ ಹಾವೇರಿಗೆ ತೆರಳಿ ನಂತರ ಬ್ಯಾಡಗಿಗೆ ಆಗಮಿಸಿದಾಗ ಸ್ತ್ರೀಯರು ಗಾಂಧೀಜಿಯವರ ಹರಿಜನ ನಿಧಿಗೆ ತಮ್ಮ ಆಭರಣಗಳನ್ನೇ ಬಿಚ್ಚಿಕೊಟ್ಟರು. ಅದೇ ದಿನ ಹಾವೇರಿ ಸಭೆಯಲ್ಲಿ 30,000 ಕ್ಕೂ ಹೆಚ್ಚು ಜನ ಸೇರಿದ್ದರು. ಸರ್ದಾರ ವೀರನಗೌಡರು ಧಾರವಾಡ, ಹಾವೇರಿ, ಹಿರೇಕೆರೂರು ಮುಂತಾದವುಗಳಲ್ಲಿ ಪತ್ನಿ ನಾಗಮ್ಮಳೊಂದಿಗೆ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. 1934 ರಲ್ಲಿ ಹುಬ್ಬಳ್ಳಿಯಲ್ಲಿ ಹರಿಜನ ಬಾಲಿಕಾಶ್ರಮ ಸ್ಥಾಪನೆ ಮಾಡಿದರು. ಇಂದು ಬಾಲಿಕಾಶ್ರಮ ಮಹಿಳಾ ವಿದ್ಯಾಪೀಠವಾಗಿ ಬೆಳೆದು ನೂರಾರು ಹರಿಜನ ತರುಣಿಯರಿಗೆ ಶಿಕ್ಷಕರಾಗಲೂ ತರಬೇತಿ ನೀಡುತ್ತಾ ಬಂದಿದೆ.

ಹೊಸರಿತ್ತಿ ಆಶ್ರಮದ ಪ್ರತಿಫಲವಾಗಿಯೇ ಚೆನ್ನಮ್ಮ ಹಳ್ಳಿಕೇರಿಯವರು ಸ್ಫೂರ್ತಿಗೊಂಡರು. ಸುತ್ತಲೂ ಪ್ರದೇಶದಿಂದ ಗುದ್ಲೆಪ್ಪ ಹಳ್ಳಿಕೇರಿ, ವೆಂಕಟೇಶ ಮಾಗಡಿ, ಮಲ್ಲನಾಯಕ ರಾಚನಾಯಕ, ಮೈಲಾರ ಮಹಾದೇವಪ್ಪ ಪ್ರಭುಜೀ ಸವಣೂರು, ರಮಾನಂದ ಮನ್ನಂಗಿ ಮುಂತಾದವರು ಸತತವಾದ ನಂಟನ್ನು ಬೆಳೆಸಿಕೊಂಡಿದ್ದರು. ಆಶ್ರಮದಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಮಾಗಡಿಯವರು ಚೆನ್ನಮ್ಮ ಹಳ್ಳಿಕೇರಿಯವರು ಪ್ರಾರ್ಥನೆ ತಪ್ಪಿಸಿದಾಗ ಕೈ ಕಟ್ಟಿ ಮೇಲೆ ತೂಗು ಹಾಕುತ್ತಿದ್ದರು. ನೀನು ಪ್ರತಿ ದಿನ ತಪ್ಪದೇ ಪ್ರಾರ್ಥನೆಗೆ ಬರುತ್ತೇನೆಂದು ಒಪ್ಪಿಕೊಂಡಾಗ ಕಟ್ಟಿದ ಕೈ ಬಿಚ್ಚುತ್ತೆನೆಂದು ಹೇಳಿದರು. ಚೆನ್ನಮ್ಮ ಒಪ್ಪಿದರು. ಅಳುತ್ತಾ ಕೈ ಕೆಂಪಾಗಿ ಉರಿಯುತ್ತಿತ್ತು. ಅಂದು ಸಮಾಜ ಸೇವೆಗೆ ಆ ಕರಗಳು ಗಟ್ಟಿಗೊಂಡವು ಎಂದು ಹೇಳಿದ್ದಾರೆ.[9]

ಚೆನ್ನಮ್ಮ ಹಳ್ಳಿಕೇರಿಯವರ ತಾಯಿ ಗೌರಮ್ಮರು ಅವರ ಪತಿ ಜೈಲಿಗೆ ಹೋಗುವಾಗ ಈ ದೇಶದ ದಾಸ್ಯಕ್ಕಾಗಿ ನಾನು ಜೈಲಿಗೆ ಹೋಗುತ್ತೇನೆಂದು ಹೇಳಿದಾಗ ಅವರು ಕೂಡಾ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದರು. ಒಂದು ವರ್ಷದ ಮಗುವಾದ ನನನ್ನು, ನನ್ನ ತಾಯಿ ಬಗಲಿನಲ್ಲಿರಿಸಿಕೊಂಡು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದಾಗ ಬ್ರಿಟಿಷರು ಅವರನ್ನು ಹಾಗೂ ಇತರೆ ಮೂರು ಜನ ಮಹಿಳಾ ಸತ್ಯಾಗ್ರಹಿಗಳನ್ನು 1932 ರಲ್ಲಿ ಬಂಧಿಸಿದರು. ಮುಂದೆ ಸ್ವಾತಂತ್ರ್ಯ ಯೋಧರ ಪ್ರತಿಭಟನೆಯಿಂದಾಗಿ 2 ವರ್ಷದವಳಾದ ನನ್ನನ್ನು ಕೂಡಾ ಹಿಂಡಲಗಾ ಜೈಲಿನಲ್ಲಿರಿಸಿಕೊಳ್ಳಲು ಅನುಮತಿ ನೀಡಿದರು. ಕೆಲದಿನಗಳಲ್ಲಿ ಅವಳ ತಾಯಿ ಹಾಗೂ ಹೆಣ್ಣು ಮಕ್ಕಳನ್ನು ಮಹಾರಾಷ್ಟ್ರದ ಧುಳೆ ಜೈಲಿಗೆ ಸ್ಥಳಾಂತರಿಸಿದರು.

1936ರಲ್ಲಿ ಗಾಂಧೀಜಿಯವರ ವಿಚಾರಧಾರೆಗಳನ್ನು ಈ ನಾಡಿಗೆ ಪಸರಿಸಲು ಧಾರವಾಡ ಜಿಲ್ಲೆಯ(ಹಾವೇರಿ ಜಿಲ್ಲೆ) ಹಾವೇರಿ ತಾಲೂಕಿನ ಕೊರಡೂರು ಗ್ರಾಮದಲ್ಲಿ ಗಾಂಧಿ ಸೇವಾಶ್ರಮವನ್ನು ಸ್ಥಾಪಿಸಿದರು. ಮೈಲಾರ ಮಹಾದೇವಪ್ಪನವರ ಮರಣದ ನಂತರ ಪತ್ನಿ ಸಿದ್ಧಮ್ಮನವರು ತಮ್ಮ ಜೀವಿತಾವಾಧಿವರೆಗೂ ಈ ಆಶ್ರಮವನ್ನು ಮುನ್ನಡೆಸಿದರು.

ಗ್ರಾಮಸೇವೆಗಾಗಿ ಕಸ್ತೂರಿಬಾ ಮರಣದ ನಂತರ ದೇಶದಾದ್ಯಂತ ಅವರ ಹೆಸರಿನಲ್ಲಿ ಸೇವಾ ಕೇಂದ್ರಗಳ ಪ್ರಾರಂಭವಾದವು. ದೇವಕ್ಕ ಮನ್ನಂಗಿಯವರು ಹೊಸರಿತ್ತಿಯಲ್ಲಿ ಕಸ್ತೂರಿಬಾ ಕೇಂದ್ರ ಸ್ಥಾಪಿಸಿದರು.

ಚೆನ್ನಮ್ಮನವರು ತಿಂಗಳಿಗೆ 20 ರೂ. ವೇತನ ಪಡೆಯುವುದರೊಂದಿಗೆ ಕೇಂದ್ರದಲ್ಲಿ ಕೆಲಸ ಮಾಡಿದರು. ಆ ಸಂದರ್ಭದಲ್ಲಿ ಉಮಾಬಾಯಿ ಕುಂದಾಪೂರ ಈ ಕೇಂದ್ರಕ್ಕೆ ಭೇಟಿ ನೀಡಿದರು. ಅಮರಗೋಳದಲ್ಲಿ ಕೂಡಾ ಗ್ರಾಮ ಸೇವಾ ತರಬೇತಿ ನಡೆಯುತ್ತಿತ್ತು.

ಉಮಾಬಾಯಿ ಕುಂದಾಪೂರರವರು ಖಾದಿ ಧಾರಿಗಳಾಗಿದ್ದು, ಅವರನ್ನು ಭೇಟಿ ಮಾಡಿದ ಚೆನ್ನಮ್ಮ ಅಲ್ಲಿ ಗ್ರಾಮ ಸೇವಾ ದಿನನಿತ್ಯದ ಕೆಲಸ ಚಟುವಟಿಕೆಗಳ ತರಬೇತಿ ಪಡೆದುಕೊಂಡರು. ಹಿರೇಕುಂಬಿಯಲ್ಲಿ ಕೂಡ ಚೆನ್ನಮ್ಮ ಹಳ್ಳಿಕೇರಿಯವರು ತರಬೇತಿ ಪಡೆದರು ಇಲ್ಲಿ ಮೀರಾ ಬೆಹನ್ ಕೊಪ್ಪಿಕರವರಿದ್ದರು. ಆ ಗ್ರಾಮ ಸೇವೆಯ ಅಂಗನವಾಡಿ ಕಾರ್ಯ ಚಟುವಟಿಕೆ ಮಾಡಿದರು,

ವೆಂಕಟೇಶ ಮಾಗಡಿ ಅವರು ಹಾಗೂ ಸರ್ದಾರ ವೀರನಗೌಡ ಪಾಟೀಲ ಅವರ ಮಗಳು ಲೀಲಾವತಿ ಮಾಗಡಿಯವರು ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಗಾಂಧೀಜಿ ಅನುಯಾಯಿಗಳಾಗಿ ಸ್ವದೇಶ ಕಲ್ಪನೆ, ಅಸಹಕಾರ ಚಳುವಳಿ, ಹರಿಜನೋದ್ಧಾರ ಮೈಗೂಡಿಸಿಕೊಂಡವರು. 60 ಜನ ದಲಿತ ಮಕ್ಕಳಿಗೆ ವೀರಣಗೌಡ್ರು ಊಟವನ್ನು ನೀಡಿದ್ದು ವಿಶೇಷಣೀಯ. ತಮ್ಮ ಮಗಳ ವಿವಾಹದಿಂದಾಗಿ ಅಂತರ್‌ಜಾತಿ, ವಿವಾಹಗಳನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿದರು. ನಾಗಮ್ಮ ಪಾಟೀಲರವರು ಗಾಂಧಿ ಅನುಯಾಯಿಗಳಾಗಿ ಹರಿಜನ ಬಾಲಿಕಾಶ್ರಮವನ್ನು ಸ್ಥಾಪಿಸಿದರು. 1941ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. 1942 ರಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಸೆರೆಮನೆ ವಾಸ ಕಂಡರು.

ಮಲ್ಲಮ್ಮಾ ಪವಾರ ಮತ್ತು ಬಸಮ್ಮ ನರಗುಂದ ಜೈಲುವಾಸದಲ್ಲಿದ್ದರು. ರತ್ನಗಿರಿಯು ತುಂಬು ಗರ್ಭಿಣಿ ಜೈಲಲ್ಲಿ ಮಗುವಿನ ಜನ್ಮ ನೀಡಿದಳು. ಸಿದ್ಧಮ್ಮ ಮೈಲಾರವರು ಗಾಂಧೀಜಿ ಸಾಬರಮತಿ ಆಶ್ರಮಕ್ಕೆ ಹೋಗಿ ಅಲ್ಲಿ ತರಬೇತಿ ಪಡೆದು ಬಂದ ನಂತರ ಗ್ರಾಮದಲ್ಲಿ ಸ್ತ್ರೀಯರನ್ನು ಸಂಘಟಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.

**ಆಧಾರ ಗ್ರಂಥಗಳು:–**

1. ಕಾಮತ್ ಸೂರ್ಯನಾಥ, 1995, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು.
2. ಕಾಮತ ಸೂರ್ಯಾನಾಥ (ಸಂ), 1974–77, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟಗಳು, ಗೀತಾಬುಕ್ ಹೌಸ್, ಮೈಸೂರು.
3. ಕಾಮತ್ ಸೂರ್ಯನಾಥ 1988, **ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು,** ಬುರ್ಲಿ ಬಿಂದು ಮಾಧವ ಸ್ಮಾರಕ, ಹುಬ್ಬಳ್ಳಿ.
4. ಗುರಡ್ಡಿ ರತ್ನಶೀಲಾ(ಲೇ), 2006,**ವೀರರಾಣಿ ಕಿತ್ತೂರು ಚೆನ್ನಮ್ಮ,** ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಗೂಡುಭಾಯಿ ಮಹಮ್ಮದಅಲಿ (ಮೂ.ಅ), 2011, **ಸ್ವಾತಂತ್ರಕ್ಕಾಗಿ ಹೋರಾಡಿದ ಮುಸ್ಲಿಮರು**. ಹಾಪೀಜಾ ಪ್ರಕಾಶನ ಹುಟ್ಟಿಕರ ಪ್ಲಾಟ್ ಸಾಧನಕೇರಿ, ಧಾರವಾಡ.

6. ಚಂದ್ರಶೇಖರ ಎಸ್,2006, **ವಸಾಹತುಕಾಲೀನ ಕರ್ನಾಟಕ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
7. ದಿವಾಕರ ರಂಗನಾಥ, 1955 , **ಕರನಿರಾಕರಣೆಯ ವೀರಗಾಥೆ,** ಲೋಕ ಶಿಕ್ಷಣ ಟ್ರಸ್ಟ, ಹುಬ್ಬಳ್ಳಿ.
8. ಪಟ್ಟಣಶೆಟ್ಟಿ ಸಿದ್ದಲಿಂಗ , 1981, ಹಳ್ಳಿಕೇರಿ ಗುದ್ಲೆಪ್ಪನವರು ಸ್ಮಾರಕ ಪ್ರತಿಷ್ಠಾನ ಹೊಸರಿತ್ತಿ (ಹಾವೇರಿ)
9. ಪಟ್ಟಣಶೆಟ್ಟಿ ಸಿದ್ದಲಿಂಗ, 2000, **ಹಳ್ಳಿಕೇರಿ ಗುದ್ಲೆಪ್ಪನವರು,** ವೀರಶೈವ ಅಧ್ಯಯನ ಸಂಸ್ಥೆ ಡಂಬಳ – ಗದಗ.
10. ಪಾಟೀಲ ಭೋಜರಾಜ, 1987, **ಹಿರೇಕೆರೂರು ತಾಲೂಕು ದರ್ಶನ** ಐ.ಬಿ.ಎಚ್, ಬೆಂಗಳೂರು.
11. ಮಠದ ಸಿ.ವಿ , 1978, **ಸ್ವಾತಂತ್ರ್ಯ ಸೌದಾಮಿನಿ,** ಉದಯ ಪ್ರಕಾಶನ ಕ್ಯಾಂಪ್, ಬೆಳಗಾವಿ.
12. ಮಲಶೆಟ್ಟಿ ಬಸವರಾಜ, 2017, **ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ.** ಕನ್ನಡ ವಿಶ್ವವಿದ್ಯಾಲಯ ಹಂಪಿ.
13. ರಾಮಸ್ವಾಮಿ ಆರ್.ಎಸ್ (ಸಂ), **ಸ್ವಾತಂತ್ರೋದಯದ ಮೈಲುಗಲ್ಲುಗಳು,** ರಾಷ್ಟ್ರೋತ್ಥಾನ ಮುದ್ರಣಾಲಯ ಬೆಂಗಳೂರು.
14. ಶ್ರೀನಿವಾಸಮೂರ್ತಿ ಎ.ಪಿ. 1987, **ಭಾರತದ ಸ್ವಾಂತಂತ್ರ್ಯ ಚಳುವಳಿ,** ಅಭ್ಯುದಯ ಪ್ರಕಾಶನ, ಬೆಂಗಳೂರು
15. ಹಾಲಪ್ಪ ಗ.ಸ. 1966, **ಭಾರತ ಸ್ವಾತಂತ್ರ್ಯ ಬೆಳ್ಳಿಚುಕ್ಕಿ,** ಕರ್ನಾಟಕ ಸಾಹಿತ್ಯ ಸಹಕಾರಿ ಸಂಘ, ಧಾರವಾಡ.
16. ಹಿರೇಮಠ ಎಂ. ಎಸ್, 2000, **ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಾವೇರಿ ಜಿಲ್ಲೆ,** ಅಪ್ಪು ಪ್ರಕಾಶನ ಕುಮಾರ ಪಟ್ಟಣಂ.
17. ಒಚ್ಚುಚಿಛಚಿಟಝುತಿಚಿಡಿಚಿ೦೦ಚಿ ಃ.ಅ ,2002 , **ಈಡಿಜಜಜಂಟ ಟಂತಜಟಜಟಣ ಎಟಿ ಜುಚಿಡಿತಿಚಿಜ ಝುಣಡಿಟಿಥಿಣ ,ಂಟಜ ಡಿಜಜಿಟಜಛಿಣುಂಟಿ** ,ಖಂಣಾಣು ಖಟಿಜುಚಿಟ ಉಝುಣಂಡಿಥಿ ಅಂಟಿಂಡಿಜಫ. ಜ್ಞುಡಿಣಾತಚಿಟಿಣುಚಿ೦ಣಡಿಚಿಟ.
18. ಸ್ವಾತಂತ್ರ್ಯ ಸವಿನೀರು ಗದಗ ಜಿಲ್ಲೆ, ಸ್ವಾತಂತ್ರ್ಯ ಸ್ವರ್ಣಮಹೋತ್ಸವ ಸಮಿತಿ 1997–98 ಆಚರಣಾ ಸಮಿತಿ, ಗದಗ.
19. ಬಿರಾದಾರ ಜಿ.ಎ (ಲೇ), 2010 "ಮುಂಬಯಿ ಕರ್ನಾಟದಲ್ಲಿ ಸವಿನಯ ಕಾನೂನು ಭಂಗ ಚಳುವಳಿ " ಅಭಿರುಚಿ ಪ್ರಕಾಶನ ಮೈಸೂರು.
20. ಮಲಶೆಟ್ಟಿ ಬಸವರಾಜ(ಲೇ), 2002 "ಕಿತ್ತೂರು ಈರವ್ವನನ್ನು ಕುರಿತು ಇತಿಹಾಸ ಮತ್ತು ಜನಪದ ಸಾಹಿತ್ಯ" ಇತಿಹಾಸ ದರ್ಶನ ಸಂಪುಟ–17, ಇತಿಹಾಸ ಅಕಾಡೆಮಿ ಬೆಂಗಳೂರು. (ಪು.ಸಂ. 207–209).
21. ರೇವಣಸಿದ್ದಪ್ಪ ಎಚ್ (ಲೇ), 1988 "ಸ್ವಾತಂತ್ರ್ಯ ಹೋರಾಟದ ವಿಶ್ಲೇಷಣೆ" ಇತಿಹಾಸ ದರ್ಶನ ಸಂಪುಟ–4 ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು. (ಪು.ಸಂ. 136–140)
22. ಸಂಪಳ್ಳಿ ಕಮಲಾ (ಲೇ), 1995 "ಸ್ವಾತಂತ್ರ್ಯ ಸಂಗ್ರಾಮದಲ್ಲಿ ವೀರವನಿತೆಯರು" ಇತಿಹಾಸ ದರ್ಶನ ಸಂಪುಟ–13 ಇತಿಹಾಸ ಅಕಾಡೆಮಿ ಬೆಂಗಳೂರು. (ಪು.ಸಂ.142–145).
23. ಸಾವಂತ ಎಂ.ವಾಯ್ 1997, "ಸ್ವಾತಂತ್ರ್ಯ ಹೋರಾಟದಲ್ಲಿ ಧಾರವಾಡದ ಪಾತ್ರ" ಇತಿಹಾಸ ದರ್ಶನ ಸಂಪುಟ–11, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು. (ಪು.ಸಂ. 305–308)
24. ಹೊಸರಿತ್ತಿಯ ಸ್ವಾತಂತ್ರ್ಯ ಹೋರಾಟಗಾರರಾದ ಚೆನ್ನಮ್ಮ ಹಳ್ಳಿಕೇರಿ ಅವರ ಸಂದರ್ಶನ ದಿನಾಂಕ 10.01.2022